**ಸಾಕ್ಷಿಯನ್ನು ದಿಃ 03.04.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಕೆ.ಎನ್.ವಕೀಲರಿಂದಃ**

ಸದರಿ ಅಪಘಾತವನ್ನು ನಾನು ಪ್ರತ್ಯಕ್ಷದರ್ಶಿಯಾಗಿ ನೋಡಿರುವುದಿಲ್ಲ. ದೂರುದಾರರು ನನ್ನ ಮೈದುನ ಮತ್ತು ಸದರಿಯವರೂ ಸಹ ಸದರಿ ಅಪಘಾತವನ್ನು ಪ್ರತ್ಯಕ್ಷದರ್ಶಿಯಾಗಿ ನೋಡಿಲ್ಲ. ನನ್ನ ಮೃತ ಗಂಡ ಚಲಾಯಿಸುತಿದ್ದ ಅಪಘಾತಕ್ಕೆ ಒಳಪಟ್ಟ ಮೋಟಾರ್ ಸೈಕಲ್‌ನ ಆರ್.ಸಿ. ಮಾಲೀಕರು ನನ್ನ ಮಗ. ನನ್ನ ಮಗ 2 ನೇ ಅರ್ಜಿದಾರರು. ಈ ದಿನ ಸದರಿ 2 ನೇ ಅರ್ಜಿದಾರರು ನ್ಯಾಯಾಲಯದಲ್ಲಿ ಹಾಜರಿರುತ್ತಾರೆ. ಸದರಿ ಅಪಘಾತದ ಸಮಯದಲ್ಲಿ ಸದರಿ 2 ನೇ ಅರ್ಜಿದಾರರಿಗೆ ಗಾಯಗಳಾಗಿರುವುದಿಲ್ಲ. ಸದರಿ ಅಪಘಾತಪಡಿಸಿದೆ ಎನ್ನಲಾದ ವಾಹನದ ಆರ್.ಸಿ. ಮಾಲೀಕರ ಪರಿಚಯವಿರುವುದಿಲ್ಲ. ಸದರಿ ಅಪಘಾತದ ಬಗ್ಗೆ ನನಗೆ ನನ್ನ ಇನ್ನೊಬ್ಬ ಮೈದುನ ಕುಮಾರ್ ರವರು ಮಾಹಿತಿ ನೀಡಿರುತ್ತಾರೆ. ನಾನು ಸದರಿ ಅಪಘಾತದ ಸ್ಥಳಕ್ಕೆ ಹೋಗಿರುವುದಿಲ್ಲ. ನನ್ನ ಮಗ ಅಪಘಾತದ ಸ್ಥಳಕ್ಕೆ ಹೋಗಿರುತ್ತಾನೆ. ಸದರಿ 2 ನೇ ಅರ್ಜಿದಾರರು ಕಾಲೇಜಿಗೆ ಹೋಗಿರುತ್ತಾರೆ. ಸದರಿ 2 ನೇ ಅರ್ಜಿದಾರರನ್ನು ಸಾಕ್ಷಿ ಮಾಡಿಸಲು ತೊಂದರೆ ಇಲ್ಲ. ಸದರಿ ಮೃತರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತಿದ್ದರಿಂದ ಅಪಘಾತದ ದಿನದಂದು ದೂರನ್ನು ನೀಡಲು ಆಗಿರುವುದಿಲ್ಲ. ಸದರಿ ಅಪಘಾತಕ್ಕೆ ಒಳಪಟ್ಟ ದ್ವಿಚಕ್ರ ವಾಹನದ ಆರ್.ಸಿ. ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಸದರಿ ಅಪಘಾತಪಡಿಸಿದ ವಾಹನದ ಚಾಲಕರ ಬಗ್ಗೆ ನನ್ನ ಮೈದುನನೊಂದಿಗೆ ವಿಚಾರ ಮಾಡಿದ್ದೀರಾ

ಎಂದರೆ ಇಲ್ಲ. ಸದರಿ ಅಪಘಾತ ಊರಿನ ಹೊರಭಾಗದಲ್ಲಿ ಆಗಿರುತ್ತದೆ ಎಂದರೆ ಸರಿ. ಸದರಿ ಅಪಘಾತಪಡಿಸಿದ ಎನ್ನಲಾದ ವಾಹನದ ಚಾಲಕರು ಅವರ ತಪ್ಪಿನಿಂದ ಸದರಿ ನನ್ನ ಗಂಡ ಚಲಾಯಿಸುತಿದ್ದ ವಾಹನಕ್ಕೆ ಡಿಕ್ಕಿಪಡಿಸಿರುತ್ತಾರೆ ಎಂದು ನನ್ನ ಮೈದುನ ನನಗೆ ತಿಳಿಸಿರುತ್ತಾರೆ. ಸದರಿ ಅಪಘಾತ ನನ್ನ ಗಂಡನ ಅಜಾಗರುಕತೆಯ ಚಾಲನೆ ಮತ್ತು ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತಕ್ಕೆ ಒಳಪಟ್ಟ ವಾಹನವನ್ನು ಚಲಾಯಿಸಲು ನನ್ನ ಗಂಡನಿಗೆ ಡಿ.ಎಲ್. ಇರಲಿಲ್ಲ ಮತ್ತು ಸದರಿ ವಾಹನಕ್ಕೆ ವಿಮೆ ಇರಲಿಲ್ಲ ಆದ್ದರಿಂದ ಸದರಿ ಅಪಘಾತದ ಪರಿಣಾಮ ದೂರನ್ನು ನೀಡಲು ವಿಳಂಭವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕುಮಾರ್ ಮತ್ತು ಚಂದ್ರಪ್ಪರವರನ್ನು ಸಾಕ್ಷಿ ಮಾಡಿಸಲು ತೊಂದರೆ ಇಲ್ಲ. ಸದರಿ ಅಪಘಾತದ ಸಮಯದಲ್ಲಿ ನನ್ನ ಗಂಡ ತಲೆಗೆ ಹೆಲ್ಮೆಟ್ ಅನ್ನು ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತದ ಸಮಯದಲ್ಲಿ ಸದರಿ ಅಪಘಾತಪಡಿಸಿದೆ ಎನ್ನಲಾದ ವಾಹನಮ್ನ ಯಾರು ಚಲಾಯಿಸುತಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಅಪಘಾತದ ಸಮಯದಲ್ಲಿ ನನ್ನ ಗಂಡ ತಾನಾಗಿಯೇ ಸದರಿ ಅಪಘಾತಕ್ಕೆ ಒಳಪಟ್ಟ ವಾಹನದಿಂದ ರಸ್ತೆಗೆ ಬಿದ್ದಾಗ ಅಪಘಾತಪಡಿಸಿದ ವಾಹನದ ಚಾಲಕರಾದ ದರ್ಶನ್ ರವರು ಸದರಿ ನನ್ನ ಗಂಡನಿಗೆ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ನಾನು ಮತ್ತು ನನ್ನ ಮೈದುನರು ಸೇರಿಕೊಂಡು ಪೊಲೀಸರೊಂದಿಗೆ ಶಾಮಿಲಾಗಿ ಸದರಿ ಅಪಘಾತಕ್ಕೆ ಒಳಪಟ್ಟ ವಾಹನದ ಚಾಲಕನ ಮೇಲೆ ಸುಳ್ಳು ದೂರನ್ನು ನೀಡಿ ಸದರಿ ವಾಹನವನ್ನು ಸದರಿ ಪ್ರಕರಣದಲ್ಲಿ ಸುಳ್ಳಾಗಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಬಳಿ ಬಿ.ಪಿ.ಎಲ್.

ಪಡಿತರ ಚೀಟಿ ಇರುತ್ತದೆ. ಅಪಘಾತವಾದ ನಂತರ ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ. ನಾವು ವೈದ್ಯಕೀಯ ಖರ್ಚಿಗಾಗಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಹಣವನ್ನು ಖರ್ಚು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮೃತ ಗಂಡ ಮರಣದ ಪೂರ್ವದಲ್ಲಿ ವ್ಯವಸಾಯ ಮತ್ತು ಹಾಲಿನ ವ್ಯಾಪಾರವನ್ನು ಮಾಡುತ್ತಿರಲಿಲ್ಲ ಮತ್ತು ಅದರಿಂದ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಬದುಕಿದ್ದಾಗ ನಮ್ಮನ್ನು 2 ನೇ ಅರ್ಜಿದಾರರು ನೋಡಿಕೊಳ್ಳುತಿದ್ದರು. 3 ನೇ ಅರ್ಜಿದಾರರು ಮದುವೆಯಾಗಿ ಅವರ ಗಂಡ ಮನೆಯಲ್ಲಿ ವಾಸವಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ 8 ನೇ ಪ್ಯಾರದಲ್ಲಿ ಹೇಳಿರುವಂತೆ ಆಸ್ಪತ್ರೆಯ ಮತ್ತು ಇತರೆ ಖರ್ಚಿಗಾಗಿ ರೂ.5,00,000/- ಹಣವನ್ನು ಖರ್ಚು ಮಡಿರುವುದಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಹಾಜರುಪಡಿಸಿ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು:</u>** *1* ನೇ ಎದುರುದಾರರು ಸದರಿ *2* ನೇ ಎದುರುದಾರರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.
**<u>ಮರುವಿಚಾರಣೆ: ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲ್ಪಟ್ಟಿದೆ)

(ಓ.ಹೆ.ಕೆ.ಸ.ಇ.)

IX ಹಿರಿಯ ಹೆಚ್ಚುವರಿ ನ್ಯಾಯಾಧೀಶರು,
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು